ಕುಡಿಯುವ ನೀರಿಗೆ ಚರಂಡಿ ನೀರು ಕಲಬೆರಕೆ

1247(1420); ಶ್ರೀ. ಅಶೋಕ ಆರ್. (ಪದ್ಮನಾಭನಗರ)

ಅ) ನಗರದಲ್ಲಿ ಕುಡಿಯುವ ನೀರಿನ ಪೈಪ್‌ನೊಳಗೆ ಕಲುಷಿತ ನೀರು ಬೆರೆತು ಮನೆಗಳ ನಲ್ಲಿಗಳಿಗೆ ಸರಬರಾಜಾಗುತ್ತಿರುವ ಬಗ್ಗೆ ಸಾರ್ವಜನಿಕರಿಂದ ದೂರುಗಳೇನಾದರೂ ಬಂದಿದೆಯೇ;

ಆ) ಹಾಗಿದ್ದಲ್ಲಿ, ಸರಬರಾಜು ಆಗುತ್ತಿರುವ ನಿತ್ಯಬಳಕೆಯ ನೀರಿನಲ್ಲಿ ಹಕ್ಕಿಗಳ ರೆಕ್ಕೆಪುಕ್ಕಗಳು, ಸಣ್ಣ ಹುಳುಗಳು ನಲ್ಲಿಗಳಲ್ಲಿ ಬರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ಒಳಚರಂಡಿ ನೀರು ಮತ್ತು ಕುಡಿಯುವ ನೀರನ್ನು ಬೇರೆ ಬೇರೆ ವಿಂಗಡಿಸಲು ಸರ್ಕಾರ ಏನಾದರೂ ಕ್ರಮ ಕೈಗೊಂಡಿದೆಯೇ;

ಈ) ಹಾಗಿದ್ದಲ್ಲಿ ಅಂತಹ ನೀರನ್ನು ಯಾವ ರೀತಿ ವಿಂಗಡಿಸಲಾಗುವುದು (ವಿವರ ನೀಡುವುದು)?

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಯವರು)

ಅ) ಬೆಂಗಳೂರು ನಗರದಲ್ಲಿ ಜಲಮಂಡಳಿಯಿಂದ 7,67,488 ಗ್ರಾಹಕರು ನೀರಿನ ಸಂಪರ್ಕ ಪಡೆದಿರುತ್ತಾರೆ. ಈ ಸಂಪರ್ಕಗಳಲ್ಲಿ ಪ್ರತಿ ನಿತ್ಯ 2 ಅಥವಾ 3 ಪ್ರಕರಣಗಳು ಕಲುಷಿತ ನೀರಿನ ಬಗ್ಗೆ ಗ್ರಾಹಕರಿಂದ ದೂರು ವರದಿ ಆಗುತ್ತದೆ.

ಆ) ತೊರೆಕಾಡನಹಳ್ಳಿಯ ನೀರು ಶುದ್ಧೀಕರಣ ಕೇಂದ್ರದಿಂದ ಅಂತರಾಷ್ಟ್ರೀಯ ಗುಣಮಟ್ಟವನ್ನು ಕಾಪಾಡಿ ನಗರದ ನಿವಾಸಿಗಳಿಗೆ ಕಾಂಡ್ಯೂಟ್ ಕೊಳವೆ ಮುಖಾಂತರ ನೀರು ಸರಬರಾಜು ಮಾಡಲಾಗುತ್ತಿದೆ. ಇದರಲ್ಲಿ ಯಾವುದೇ ಹಕ್ಕಿಗಳ ರೆಕ್ಕೆಪುಕ್ಕಗಳು, ಸಣ್ಣ ಹುಳುಗಳು ನಲ್ಲಿಗಳಲ್ಲಿ ಬರುವುದಿಲ್ಲ.

ಇ) ಪ್ರಸ್ತುತ ಬೆಂಗಳೂರು ನಗರದಲಿ ಎಲ್ಲಾ ನೀರಿನ ಕೊಳವೆಗಳು ಮತ್ತು ಒಳಚರಂಡಿ ಕೊಳವೆಗಳು ಸುರಕ್ಷಿತವಾದ ಅಂತರದಲ್ಲಿ ಅಳವಡಿಸಲಾಗಿರುತ್ತದೆ. ಕೆಲವೊಂದು ಪ್ರದೇಶಗಳಲ್ಲಿ ಇಕ್ಕಟ್ಟಾದ ರಸ್ತೆಗಳಲ್ಲಿ ನೀರು ಮತ್ತು ಒಳಚರಂಡಿ ಕೊಳವೆಗಳು ಹತ್ತಿರದಲ್ಲಿರುತ್ತದೆ. ಇಂತಹ ದೂರು ಬಂದಲ್ಲಿ ಜಲಮಂಡಳಿಯು ಹೊಸ ಕೊಳವೆ ಮಾರ್ಗವನ್ನು ಸುರಕ್ಷಿತವಾದ ಅಂತರದಲ್ಲಿ ಅಳವಡಿಸಲಾಗುವುದು.

ಈ) ಜಲಮಂಡಳಿಯ ನೀರು ಸರಬರಾಜು ಕೊಳವೆಗಳಲ್ಲಿ ಕಲುಷಿತ ನೀರಿನ ಬಗ್ಗೆ ಗ್ರಾಹಕರ ದೂರು ಜಲಮಂಡಳಿಯ ಗಮನಕ್ಕೆ ಬಂದ ಕೂಡಲೇ ಆ ಮನೆಗೆ / ರಸ್ತೆಗೆ / ಬಡಾವಣೆಗೆ ನೀರಿನ ಸರಬರಾಜನ್ನು ಸ್ಥಗಿತಗೊಳಿಸಲಾಗುವುದು. ತದ ನಂತರ ಕಲುಷಿತ ನೀರಿನ ಪೀಡಿತ ನಿವಾಸಿಗಳಿಗೆ ಟ್ಯಾಂಕರ್ ಮೂಲಕ ಕೂಡಲೇ ಶುದ್ಧ ನೀರು ಸರಬರಾಜು ಮಾಡಲಾಗುವುದು. ಕಲುಷಿತ ನೀರು ಮಿಶ್ರಣವಾಗುವ ಸ್ಥಳವನ್ನು ಪತ್ತೆ ಮಾಡಿ ಅದನ್ನು ಕೂಡಲೇ ಸರಿಪಡಿಸಿ ತಕ್ಷಣ ಶುದ್ಧ ನೀರನ್ನು ಗ್ರಾಹಕರಿಗೆ ಸರಬರಾಜು ಮಾಡಲು ಕ್ರಮ ಕೈಗೊಳ್ಳಲಾಗುವುದು.

ನಿವೇಶನದಲ್ಲಿ, ಹಳೆಯ ತುಕ್ಕು ಹಿಡಿದ ಗೃಹ ಬಳಕೆ ನೀರಿನ ಸಂಪರ್ಕಗಳನ್ನು ಎಂ.ಡಿ.ಪಿ.ಇ. ಕೊಳವೆ ಅಳವಡಿಸುವ ಮುಖಾಂತರ ಕುಡಿಯುವ ನೀರು ಕಲುಷಿತಗಳ್ಳದಂತೆ ಜಲಮಂಡಳಿಯು ಈಗಾಗಲೇ ಕ್ರಮ ಕೈಗೊಂಡಿರುತ್ತದೆ.